ಅ)	ಖಂಟ (ಯೋಜನೆ)	೨೦.೬೯ ಲಕ್ಷ ರೂ.ಗಳು
	ಖಂಟ (ಯೋಜನೇತರ)	೮೬.೬೫ ಲಕ್ಷ ರೂ.ಗಳು
	ಒಟ್ಟು	೮೮೭.೩೨ ಲಕ್ಷ ರೂ.ಗಳು

		ಪರ್ಕ್ ಚಾರ್ಜ್ ಸಿಬ್ಬಂದಿ	ದಿನಗೂಲಿ ನೌಕರರು
ಇ)	ಖಂಟ (ಯೋಜನೆ) ೧	೧-೦೧ ಲಕ್ಷ ರೂ.ಗಳು	೧.೨೦ ಲಕ್ಷ ರೂ.ಗಳು
	ಖಂಟ (ಯೋಜನೇತರ)	೨೯.೬೦ ಲಕ್ಷ ರೂ.ಗಳು	೧೧೮.೪೫ ಲಕ್ಷ ರೂ.ಗಳು
	ಒಟ್ಟು	೩೦.೬೧ ಲಕ್ಷ ರೂ.ಗಳು	೧೧೯.೬೫ ಲಕ್ಷ ರೂ.ಗಳು

ಈ) ವರ್ಕ್ ಚಾರ್ಜ್ ಸಿಬ್ಬಂದಿ ಮತ್ತು ದಿನಗೂಲಿ ನೌಕರರ ಸಂಬಳವನ್ನು ಕೆಲಸಗಳ ಲೆಕ್ಕಕ್ಕೆ ನೇಮಿಸಿರುವುದರಿಂದ ಸಂಬಳ ಬಾಬಿಗೆ ಮಾಡಿದ ಮೊತ್ತವೆಂದು ಪರಿಗಣಿಸುವುದು ಸಾಧ್ಯವಿಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಮಾನ್ಯ ಅಧ್ಯಕ್ಷರೆ ಯೋಜನೆ ಪೆಚ್ಚಿಗಳಿಗಿಂತ ಯೋಜನೇತರ ಪೆಚ್ಚಿಗಳೇ ಜಾಸ್ತಿ ಇದೆ. ಯೋಜನೇತರ ಪೆಚ್ಚಿಗಳು ಯಾವ ರೀತಿಯಲ್ಲಿ ಜಾಸ್ತಿಯಾಗಿವೆ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವಂತಹ ಹೆಡ್ ಆಫ್ ಅಕೌಂಟಿನಲ್ಲಿ ಇರತಕ್ಕಂತಹ ಹಣವನ್ನು ನಾವು ಈ ಯೋಜನೇತರ ಪೆಚ್ಚಿಗಳಿಗೆ ಹೆಚ್ಚು ಖರ್ಚು ಮಾಡುತ್ತೇವೆ. ಆದ್ದರಿಂದ ಈ ಉತ್ತರವನ್ನು ಕೊಟ್ಟಿದ್ದೇನೆ. ಈಗ ಸಣ್ಣ ಸಣ್ಣ ಯೋಜನೆಗಳಿಗೆ ಸುಮಾರು ೩೨–೩೩ ಕೋಟಿ ರೂಪಾಯಿಗಳನ್ನು ಇಟ್ಟು ಕೆಲಸ ಮಾಡಿಸುತ್ತೇವೆ. ಈ ಹೆಡ್ ಆಫ್ ಅಕೌಂಟಿನಲ್ಲಿ ನಿರ್ವಹಣಾ ಪೆಚ್ಚಿ ಕೂಡ ಬರುತ್ತದೆ. ಬೇರೆ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಕಾವೇರಿ ಜಲವಿವಾದ

೧೩೩ (೩೦೫) ಶ್ರೀ ಡಿ.ಎ. ಚಿನ್ನಪ್ಪ (ಪುಡಿಕೇರಿ).—ಮಾನ್ಯ ಲೋಕೋಪಯೋಗಿ, ನೀರಾವರಿ ಹಾಗೂ ಜಲಾನಯನ ಪ್ರದೇಶಾಭಿವೃದ್ಧಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಾವೇರಿ ನೀರಿನ ವಿವಾದದ ಸಭೆಗಳಿಗೆ ಆದ ಖರ್ಚಿನ ಮೊತ್ತವೇನು ?

ಆ) ಈ ವಿಷಯವು ಇತ್ಯರ್ಥದ ಅಂತಿಮಘಟ್ಟದಲ್ಲಿದೆಯೇ ?

ಇ) ಇಲ್ಲದಿದ್ದಲ್ಲಿ ಇದು ಯಾವಾಗ ಇತ್ಯರ್ಥವಾಗಬಹುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಾವೇರಿ ನೀರಿನ ವಿವಾದವು ೧೯೭೦ ರಿಂದಲೂ ಇದ್ದು ಖರ್ಚಿನ ವಿವರ ಒದಗಿಸಲು ಸಾಧ್ಯವಾಗದು.

ಆ) ಈ ವಿಷಯವನ್ನು ಸಂದಾನದ ಮೂಲಕವೇ ಬಗೆಹರಿಸಿಕೊಳ್ಳಬಹುದೆಂಬುದು ನಮ್ಮ ರಾಜ್ಯದ ನಿಲುವು ಮತ್ತು ಅದೇ ರೀತಿ ಮುಂದುವರಿಯುತ್ತಿದೆ.

ಇ) ಹೇಳಲಾಗುವುದಿಲ್ಲ.

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕಾವೇರಿ ನೀರಿನ ವಿವಾದದ ಬಗ್ಗೆ ನಡೆದಿರುವ ಸಭೆಗಳಿಗೆ ಸರ್ಕಾರವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ. ೧೯೭೦ನೇ ಇಸವಿಯಿಂದ ಈ ವಿವಾದದ ಬಗ್ಗೆ ಎಷ್ಟು ಸಾರಿ ಮೀಟಿಂಗ್ಸ್ ಆಗಿದೆ ? ಹಾಗು ಎಷ್ಟು ಖರ್ಚಾಗಿದೆ ? ಕಳೆದ ವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ? ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಡುತ್ತೀರಿ ?

ಶ್ರೀ ಹೆಚ್.ಡಿ. ದೇವೇಗೌಡ... ಇದರ ಬಗ್ಗೆ ಅಕೌಂಟ್ಸ್ ಕೊಡಲಿಕ್ಕೆ ತೊಂದರೆ ಇಲ್ಲ. ೧೯೬೦ನೇ ಇಸವಿಯಿಂದ ಮಾಡಿಂಗ್ಸ್‌ಗೆ ಎಷ್ಟು ಖರ್ಚಾಯಿತು, ಕಾಫಿ ತರಿಸುವುದಕ್ಕೆ ಎಷ್ಟು ಖರ್ಚು ಮಾಡಲಾಗಿದೆ, ಟಿ.ವಿ. ಪಾತ್ರ ಡಿ.ವಿ. ಎಷ್ಟು ಕೊಟ್ಟಿದ್ದಾರೆ ಎಂಬುದೆಲ್ಲಾ ಲೆಕ್ಕಾ ಇದ್ದೇ ಇರುತ್ತದೆ. ಮಾಡಿಸಬೇಕು ಎಂದರೆ ಹುಡುಕಿಸುತ್ತೇನೆ. ೬೦ನೇ ಇಸವಿಯಿಂದ ಅಂದರೆ ಸುಮಾರು ೨೭ ವರ್ಷಗಳ ಲೆಕ್ಕವನ್ನು ನೋಡಬೇಕಾಗುತ್ತದೆ. ಸ್ವಲ್ಪ ಟೈಮ್ ಕೊಟ್ಟರೆ ಹುಡುಕಿಸಿ ಇಡುತ್ತೇನೆ.

ಇನ್ನು ವಿನಯವಾಗಿ ಹೇಳಬೇಕೆಂದರೆ, ಪರಸ್ಪರ ಸಂಧಾನದ ಮುಖೇನ ಹಾಗು ಚರ್ಚೆಯ ಮುಖೇನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಪ್ರತಿಪಾದನೆ ಮಾಡಿದ್ದೇವೆ. ಆ ನಿಲುವಿನಲ್ಲಿ ನಮಗೆ ಆಸೆ ಇದೆ ಹಾಗು ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಡಿ.ವಿ. ಜಿನ್ನಪ್ಪ... ತಮಿಳುನಾಡಿನ ಸರ್ಕಾರದೊಂದಿಗೆ ೧೯೭೪ನೇ ಇಸವಿಯಲ್ಲಿ ಆದ ಅಗ್ರಿಮೆಂಟ್ ಪ್ರಕಾರ ತಮಿಳುನಾಡು ಸರ್ಕಾರದ ಸ್ಟ್ಯಾಂಡಿಂಗ್ ಏನೆಂದು ತಿಳಿಸುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ... ಈ ವಿಷಯದ ಬಗ್ಗೆ ವಿವಿಧ ಹಂತದಲ್ಲಿ ವಿವಿಧ ಚರ್ಚೆಯಾಗಿದೆ. ೧೯೭೪ರಲ್ಲಿ ಒಂದು ರೀತಿಯ ಜರ್ಜೆಯಾಗಿರಬಹುದು ೧೯೮೪ರಲ್ಲಿ ಒಂದು ರೀತಿಯ ಚರ್ಚೆಯಾಗಿರ ಬಹುದು. ಒಂದೊಂದು ರೀತಿಯಲ್ಲಿ ಬಂದೊಂದು ತರಹ ಚರ್ಚೆಗಳಾಗಿವೆ. ಯಾವುದರ ಬಗ್ಗೆಯೂ ಸಮರ್ಪಕವಾಗಿ ಚರ್ಚೆಗಳು ಆಗಿಲ್ಲ. ಸಂಧಾನದ ಚರ್ಚೆಗಳು ಆಗುತ್ತಲೇ ಬಂದಿವೆ. ಇನ್ನೂ ನಿರ್ಣಯವಾದ ಚರ್ಚೆಯಾಗಿಲ್ಲ. ಈ ವಿಷಾದವನ್ನು ಬಗೆಹರಿಸಿಕೊಳ್ಳಲಿಕ್ಕೆ ಸ್ನೇಹ ಸೌಹಾರ್ದ ಭಾವನೆಗಳಿಂದ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಮ್ಮ ಆಸೆ.

ಶಾಹಾಬಾದ್ ಭೀಮಾ ರಸ್ತೆಯ ವಿಸ್ತರಣೆ

೧೫೪೪ (೫೩೬) ಶ್ರೀ ಕೆ. ಬಿ. ಶಾಣಪ್ಪ (ಶಾಹಾಬಾದ್)... ಮಾನ್ಯ ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಶಾಹಾಬಾದ್ ಭೀಮಾ ರೋಡ್ ೧೭ ಕಿ. ಮೀ. ಉದ್ದ ಇದ್ದು ಈಗ ೫ ಕಿ. ಮೀ. ಡಾಂಬರ್ ರಸ್ತೆ ಆಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಉಳಿದ ೧೨ ಕಿ. ಮೀ. ಉದ್ದದ ರಸ್ತೆ ತುಂಬಾ ಹಾಳಾಗಿದ್ದು ಈ ವರ್ಷದಲ್ಲಿ ಅದನ್ನು ಡಾಂಬರ್ ರಸ್ತೆಯನ್ನಾಗಿ ಮಾರ್ಪಡಿಸುವ ಭರವಸೆ ಸರಕಾರದವರು ಕೊಡುವರೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).

ಅ) ಶಾಹಾಬಾದ ಭೀಮಾ ರಸ್ತೆಯ ಒಟ್ಟು ಉದ್ದ ೧೪.೯೦ ಕಿ. ಮೀ. ಇರುವುದು. ಇದರ ಪೈಕಿ ೪.೦೦ ಕಿ. ಮೀ. ಉದ್ದಕ್ಕೆ ಡಾಂಬರ್ ಮಾಡಲಾಗಿದೆ.

ಆ) ಉಳಿದ ೧೦.೯೦ ಕಿ. ಮೀ. ಉದ್ದ ಜಲ್ಲಿ ರಸ್ತೆಯಾಗಿದ್ದು, ಮೇಲ್ಕಂಡ ಕಟ್ಟಿದ್ದರಿಂದ ಮಾರು ಜಲ್ಲಿ ಕಾರ್ಯ ಈ ವರ್ಷದಲ್ಲಿ ತೆಗೆದುಕೊಳ್ಳಲಾಗಿದೆ. ಈ ಭಾಗದ ರಸ್ತೆಗೆ ಡಾಂಬರ್ ಮಾಡುವ ಕೆಲಸ ವನ್ನು ಆರ್ಥಿಕ ಲಭ್ಯತೆಯನ್ನಾಧರಿಸಿ, ಬರುವ ವರ್ಷಗಳಲ್ಲಿ ತೆಗೆದುಕೊಳ್ಳುವುದನ್ನು ಪರಿಶೀಲಿಸ ಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ... ಮಾನ್ಯ ಅಧ್ಯಕ್ಷರೇ, ಈ ರಸ್ತೆ ಬಗ್ಗೆ ಏಕೆ ಇಷ್ಟು ಹೇಳುತ್ತಿದ್ದೇನೆಂದರೆ, ಆಹರ್ ಕೃಷ್ಣ ಪ್ರಾಜೆಕ್ಟ್‌ಗೆ ಬೇಕಾದಂಥ ರಾ-ಮೆಟೀರಿಯಲ್, ಹಾಗೂ ಸಿಮೆಂಟ್ ಈ ರಸ್ತೆಯು ಮೂಲಕವೇ ಹೋಗಬೇಕು, ಈ ರಸ್ತೆಯಲ್ಲಿ ಕೇವಲ ೪ ಕಿಲೋ ಮೀಟರ್‌ಗಷ್ಟೇ ಮಾತ್ರ ಡಾಂಬರನ್ನು ಹಾಕಲಾಗಿದೆ. ವಿಜಾಪುರ ಹಾಗು ಇನ್ನಿತರ ಕಡೆ ಈ ರಸ್ತೆಯ ಮುಖಾಂತರ ಸಿಮೆಂಟ್ ಲಾರಿಗಳು ಓಡಾಡುತ್ತವೆ. ಹೊಸಗಾರಿ ವಿಜಾಪುರ ಮತ್ತು ಧಾಯಕೊರಿಗೆ ಶಾಹಾಬಾದ್‌ನಿಂದ ಹೋಗುವ ರಸ್ತೆಯನ್ನು ೧೦ ಕಿಲೋ ಮೀಟರ್‌ನಷ್ಟು ಮಾಡಿಸಿದ್ದೀರಿ. ಇದನ್ನೂ ಹಾಗೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.